# ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ವ್ಯಕ್ತಿತ್ವ

**ಸ್ವಾಮಿ ರಾಘವೇಶಾನಂದ**

ಮನುಕುಲಕ್ಕೆ ಗೀತೆಯ ದಿವ್ಯಜ್ಯೋತಿಯನ್ನು ನೀಡಿದ ಶ್ರೀಕೃಷ್ಣನ ಅಸಾಧಾರಣ ವ್ಯಕ್ತಿತ್ವವನ್ನರಿತರೆ ಗೀತೆಯ ತತ್ತ್ವ, ಉಪದೇಶಗಳನ್ನು ಅರಿತುಕೊಳ್ಳುವುದು ಸುಲಭ. ಅವನ ದಿವ್ಯ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಕುರಿತು ಇಲ್ಲಿ ಬರೆದಿರುವ ಪೂಜ್ಯ ಸ್ವಾಮೀಜಿಯವರು ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

ಶ್ರೀಕೃಷ್ಣನ ಚರಿತ್ರೆ ಯಾರಿಗೆ ತಾನೇ ಗೊತ್ತಿಲ್ಲ? ಶ್ರೀಕೃಷ್ಣ ಭಾರತದ ಜನಮಾನಸವನ್ನು ಸಹಸ್ರಾರು ವರ್ಷಗಳಿಂದ ಆವರಿಸಿಕೊಂಡಿರುವ ವ್ಯಕ್ತಿ. ಅವನ ಕುರಿತು ಭಾರತದ ಎಲ್ಲ ಭಾಷೆಗಳಲ್ಲಿ ಅಪಾರ ಸಾಹಿತ್ಯ ರಚಿತವಾಗಿದೆ. ಅದರ ಜೊತೆಗೆ ಅವನ ಭಗವದ್ಗೀತೆಯೂ ಅಷ್ಟೆ. ಆಧುನಿಕ ಮನುಷ್ಯನ ಆಕರ್ಷಣೆಯನ್ನು ಕಳೆದುಕೊಳ್ಳದ ಯಾವುದಾದರೂ ಗ್ರಂಥವಿದೆಯೇ ಈ ಜಗತ್ತಿನಲ್ಲಿ ಎಂದು ಪರ್ಯಾಲೋಚಿಸಿದರೆ ಅದು ಭಗವದ್ಗೀತೆ ಎಂಬುದು ಬಹಳ ಮಹತ್ವದ ಸಂಗತಿಯಾಗಿದೆ. ಆಧುನಿಕ ಮನಸ್ಸು ಅಥವಾ ವೈಜ್ಞಾನಿಕ ಮನಸ್ಸು ಎಲ್ಲಾ ಶಾಸ್ತ್ರಗಳಲ್ಲಿ ಅಪನಂಬಿಕೆಯನ್ನು ಬೆಳೆಸಿಕೊಂಡು, ಸಾಂಪ್ರದಾಯಿಕ ಧರ್ಮಗಳು ನೀಡುವ ಮೌಲ್ಯಗಳನ್ನು ತಿರಸ್ಕರಿಸಿವೆ. ಆಧುನಿಕ ವೈಜ್ಞಾನಿಕ ಸಿದ್ಧಾಂತಗಳ ಬೆಂಕಿಯು ಪ್ರಪಂಚದ ಎಲ್ಲಾ ಧರ್ಮಗಳ ಮೇಲೆ, ಅವುಗಳ ಸಿದ್ಧಾಂತದ ಮೇಲೆ ತನ್ನ ಜ್ವಾಲೆಯನ್ನು ಹರಡಿದೆ. ಅದರ ಫಲಿತಾಂಶ ಇಬ್ಬರಿಗೂ ಹಾನಿಕರವಾಗಿದೆ. ಬರಿಯ ನಂಬಿಕೆಯ ಮೇಲೆ ಬದುಕುವುದು ಅದರಲ್ಲೂ ಅಂತಹ ನಂಬಿಕೆಯು ದೃಢೀಕೃತವಾದ ಸತ್ಯಕ್ಕೆ ಸರಿಹೊಂದದಿದ್ದಲ್ಲಿ ಇನ್ನೂ ಕಷ್ಟಕರವಾಗುತ್ತದೆ. ಅಲ್ಲೋಲಕಲ್ಲೋಲವಾಗಿರುವ ಆಧುನಿಕ ಮನಸ್ಸು ಎಲ್ಲಿ ವಿಶ್ರಾಂತಿ ದೊರೆಯಬಹುದು ಎಂದು ಸತ್ಯದ ಬಂಡೆಯನ್ನು ಹುಡುಕುತ್ತಿದೆ. ಇಂತಹ ಮನಸ್ಸಿಗೆ ಭಗವದ್ಗೀತೆ ಭರವಸೆಯ ಸಂದೇಶವನ್ನು ತರುತ್ತದೆ. ಕಾರಣ ಇದನ್ನು ಉಪದೇಶಿಸಿರುವ ವ್ಯಕ್ತಿಯು ಸಾಧಾರಣ ಮನುಷ್ಯನಲ್ಲ. ಅವನನ್ನು ನೀವು ಭಗವಂತನೆಂದಾದರೂ ಭಾವಿಸಿ, ಅಥವಾ ಉತ್ತಮ ಚಿಂತಕನೆಂದಾದರೂ ಭಾವಿಸಿ, ಅಥವಾ ಅವತಾರ ಪುರುಷನೆಂದಾದರೂ ಭಾವಿಸಿ. ಶ್ರೀಕೃಷ್ಣನ ಜೀವನವನ್ನು ಮೂರು ದೃಷ್ಟಿಕೋನಗಳಿಂದ ಅಧ್ಯಯನ ಮಾಡಬಹುದು. ಭಕ್ತಿಭಾವದಲ್ಲಿ, ಚಾರಿತ್ರಿಕವಾಗಿ ಹಾಗೂ ವಿಮರ್ಶಾತ್ಮಕವಾಗಿ — ಭಗವದ್ಗೀತೆಯಲ್ಲಿ ಅವನನ್ನು ಈ ಮೂರೂ ಹಿನ್ನೆಲೆಯಲ್ಲಿ ಕಾಣಲು ಸಾಧ್ಯ.

ಭಕ್ತರು ಪೂರ್ಣನಂಬಿಕೆಯಿಂದ ಅವನಲ್ಲಿ ಶರಣು ಹೋಗಿ ಅವನನ್ನು ಪೂಜಿಸುತ್ತಾರೆ, ನಾಮಗುಣ ಕೀರ್ತನೆ ಮಾಡುತ್ತಾರೆ. ಅವರು ಅವನ ಮೇಲೆ ಸಲ್ಲಿಸುವ ಭಕ್ತಿಯಿಂದಲೇ ಪೂರ್ಣ



ತೃಪ್ತಿಪಡುತ್ತಾರೆ. ಅಂತಹವರಿಗೆ ಶ್ರೀಕೃಷ್ಣನು, ''ಅರ್ಜುನ, ಯಾರು ನನ್ನನ್ನು ಭಜಿಸುತ್ತಾರೋ ಅಂತಹವನು ಬೇಗ ಧರ್ಮಾತ್ಮನಾಗುತ್ತಾನೆ, ಮತ್ತು ಶಾಶ್ವತವಾದ ಶಾಂತಿಯನ್ನು ಪಡೆಯುತ್ತಾನೆ. ನನ್ನ ಭಕ್ತನು ಎಂದಿಗೂ ನಾಶವಾಗುವುದಿಲ್ಲ ಎಂಬುದನ್ನು ತಿಳಿದುಕೊ'' *(ಗೀತಾ. ೯.೩೦)* ಎಂದು ಆಶ್ವಾಸನೆ ಕೊಡುತ್ತಾನೆ.

ಇನ್ನು ಕೆಲವರು ಅಂತಹ ಅವತಾರ ಪುರುಷ ಇದ್ದನೆ? ಅವನ ಜನ್ಮ ಯಾವಾಗ ಆಗಿತ್ತು ? ಏನೇನು ಮಾಡಿದ? ಅದಕ್ಕೆ ಆಧಾರವಿದೆಯೆ? ಎನ್ನುವ ಸಂದೇಹದ ಸುಳಿಗಳಲ್ಲೇ ಜೀವನವಿಡೀ ಕಳೆಯುತ್ತಾರೆ. ಮಹಾಭಾರತದ ಕಾಲವೇ ಶ್ರೀಕೃಷ್ಣನ ಕಾಲ

ಎಂದು ಹೇಳಿದರೂ ಅರ್ಜುನನು ಶ್ರೀಕೃಷ್ಣನನ್ನು, ''ನಿನ್ನ ಜನ್ಮ ಈಚಿನದು, ಸೂರ್ಯನ ಜನ್ಮ ಹಿಂದಿನದು. ನೀನು ಇದನ್ನು ಮೊದಲೇ ಉಪದೇಶ ಮಾಡಿದೆ ಎಂಬುದನ್ನು ಹೇಗೆ ತಿಳಿದು ಕೊಳ್ಳಲಿ?'' ಎಂದು ಪ್ರಶ್ನಿಸಿದಾಗ ಶ್ರೀಕೃಷ್ಣ ತನ್ನ ಜನ್ಮರಹಸ್ಯವನ್ನು ತಿಳಿಸುತ್ತಾನೆ: ''ಅರ್ಜುನ, ನನಗೂ ನಿನಗೂ ಹಲವು ಜನ್ಮಗಳು ಆಗಿವೆ. ಅವುಗಳೆಲ್ಲವನ್ನೂ ನಾನು ಬಲ್ಲೆ. ನೀನು ತಿಳಿಯಲಾರೆ. ನಾನು ಅವ್ಯಯನು. ನನ್ನ ಪ್ರಕೃತಿಯನ್ನು ಹಿಡಿತದಲ್ಲಿ ಇಟ್ಟು ಕೊಂಡು ನನ್ನ ಮಾಯೆಯ ಮೂಲಕ ಅವತಾರ ಮಾಡುತ್ತೇನೆ'' ಎಂದು ತನ್ನ ಜೀವನ ರಹಸ್ಯವನ್ನು ತಿಳಿಸುತ್ತಾನೆ. *(ಗೀತೆ. ೪.೬)* ಅಂದರೆ ಸಾಧಾರಣ ಮನುಷ್ಯನ ಚರಿತ್ರೆಯನ್ನು ನಿರ್ಣಯಿಸು ವಂತೆ ಶ್ರೀಕೃಷ್ಣನ ಚರಿತ್ರೆಯನ್ನು ನಿರ್ಣಯಿಸಬಾರದು.

ಮೂರನೆಯದು ವಿಮರ್ಶಾತ್ಮಕವಾಗಿ. ಇದರಲ್ಲಿ ನಾವು ಅವನ ಉಪದೇಶಗಳನ್ನು ಚರ್ಚಿಸುತ್ತೇವೆ. ಅದು ಈ ಕಾಲಕ್ಕೆ ಅನ್ವ ಯವೆ? ಎಂದೆಲ್ಲಾ ವಿಮರ್ಶಿಸುತ್ತೇವೆ. ಶ್ರೀಕೃಷ್ಣನು ಅರ್ಜುನ ನಿಗೆ ಕೊಟ್ಟ ಉಪದೇಶಗಳು ಸಾರ್ವಕಾಲಿಕವಾದುದೆಂಬುದನ್ನೂ ಎಲ್ಲ ವಿಮರ್ಶಕರೂ ಒಪ್ಪುತ್ತಾರೆ. ಅವುಗಳನ್ನು ವಿವರಿಸುವುದರಲ್ಲಿ ಮತಭೇದವಿರಬಹುದೇ ಹೊರತು ಉಪದೇಶಗಳಲ್ಲಿ ಅಲ್ಲ. ಇಲ್ಲಿ ನಾವು ಶ್ರೀಕೃಷ್ಣನನ್ನು ಒಂದು ಹೊಸ ಪಾತ್ರದಲ್ಲಿ ಕಾಣುತ್ತೇವೆ. ಅವನ ಎಲ್ಲ ವ್ಯಕ್ತಿತ್ವದಲ್ಲಿ ಇದೊಂದು ಶ್ರೇಷ್ಠ ವ್ಯಕ್ತಿತ್ವ ಎಂದರೆ ತಪ್ಪಾಗಲಾರದು. ಇಲ್ಲಿ ಅವನು ಬರಿಯ ತಾತ್ತ್ವಿಕ ನೆಲೆಯಿಂದ ಮಾತಾನಾಡುವುದಿಲ್ಲ, ಅಥವಾ ಸಾಧಾರಣ ಸಂತರಂತೆ ತಮ್ಮ ಒಂದು ಆಧ್ಯಾತ್ಮಿಕ ಸಾಕ್ಷಾತ್ಕಾರದ ಅನುಭವದ ನೆಲೆಯಿಂದಲೂ ಮಾತನಾಡುವುದಿಲ್ಲ. ಆದರೆ ಇಡೀ ಮಾನವ ಸಮಾಜವನ್ನೇ ಒಂದು ಉತ್ಕೃಷ್ಟ ಸ್ಥಿತಿಗೆ ಎತ್ತುವ ರೀತಿ ಯಲ್ಲಿ ಮಾತನಾಡು ತ್ತಾನೆ. ಅವನ ಮಾತುಗಳು ಪ್ರತಿಯೊಬ್ಬ ಜೀವಿಯ ಅಂತಃಶಕ್ತಿ ಯನ್ನು ಬಡಿದೆಬ್ಬಿಸುವಂತಿದೆ.

ಅವನು ಇಲ್ಲಿ ಅರ್ಜುನನ ಸಾರಥಿಯಾಗಿ, ಅವನ ಸ್ನೇಹಿತ ನಾಗಿ ಪ್ರವೇಶಿಸುತ್ತಾನೆ. ಕುರುಕ್ಷೇತ್ರದ ವಿಶಾಲ ಸೈನ್ಯವನ್ನು ನೋಡಿ ಅರ್ಜುನನು ಹೆದರುತ್ತಾನೆ. ಆತ್ಮಸ್ಥೈರ್ಯವನ್ನು ಕಳೆದು ಕೊಳ್ಳುತ್ತಾನೆ. ಇದು ಪ್ರತಿಯೊಬ್ಬ ಮನುಷ್ಯನಿಗೂ ಇದು ಜೀವನ ದಲ್ಲಿ ಇದ್ದೇ ಇದೆ. ಆದರೆ ಪ್ರಮಾಣದಲ್ಲಿ ವ್ಯತ್ಯಾಸವಷ್ಟೆ. ಅರ್ಜು ನನು ಅವನ ಭಯವನ್ನು ಧರ್ಮದ ಹೆಸರಿನಲ್ಲಿ, ಮಾನವೀ ಯತೆಯ ಸೋಗು ಹಾಕಿಕೊಂಡು 'ರಾಜ್ಯಕ್ಕಾಗಿ ತನ್ನ ಬಂಧು ಬಾಂಧವರನ್ನೆಲ್ಲಾ ಕೊಲ್ಲುವುದು ಯಾವ ನ್ಯಾಯ, ಅದಕ್ಕಿಂತ ಎಲ್ಲವನ್ನೂ ತ್ಯಾಗ ಮಾಡಿ, ಕಾಡಿಗೆ ಹೋಗಿ ಸಂನ್ಯಾಸ ಸ್ವೀಕರಿಸು ತ್ತೇನೆ' ಎನ್ನುತ್ತಾನೆ. ಆದರೆ ಶ್ರೀಕೃಷ್ಣನ ತೀಕ್ಷ್ಣ ಕಣ್ಣುಗಳು ಅರ್ಜು ನನ ಹೃದಯವನ್ನು ಹೊಕ್ಕು ಅವನ ಅಂತರಾಳದಲ್ಲಿ ಏನಿದೆ ಎನ್ನುವುದನ್ನು ಪತ್ತೆ ಹಚ್ಚಿದವು. ಅವನು ಅರ್ಜುನನಿಗೆ, 'ಭಯ ದಿಂದ ದೂರವಾಗಿ ನಿನ್ನ ಸ್ವಧರ್ಮವಾದ ಯುದ್ಧದಲ್ಲಿ ತೊಡಗು' ಎಂದು ಪ್ರೋತ್ಸಾಹಿಸುತ್ತಾನೆ.



ಭಗವದ್ಗೀತೆಯ ಮಧ್ಯದಲ್ಲಿ ಅಲ್ಲಲ್ಲಿ ಶ್ರೀಕೃಷ್ಣನ ವ್ಯಕ್ತಿತ್ವವೂ ಬೆಳಕಿಗೆ ಬರುತ್ತದೆ. ಶ್ರೀಕೃಷ್ಣನ ಭಕ್ತರು ಪರಮಾತ್ಮನ ಸಂಪೂರ್ಣ ಅವತಾರ ಅವನು ಎಂದು ನಂಬುತ್ತಾರೆ. ಭಾಗವತವು ಅವನನ್ನು ''ಕೃಷ್ಣಸ್ತು ಭಗವಾನ್ ಸ್ವಯಂ'' ಎಂದು ಹೇಳಿದ್ದರೂ, ನಮಗೆ ನಿಜವಾಗಿ ಭಗವತ್‌ಸ್ವರೂಪ ಎಂಥಹದು ಎಂದು ಸರಿಯಾಗಿ ತಿಳಿ ದಿಲ್ಲವಾದ್ದರಿಂದ ಶ್ರೀಕೃಷ್ಣನು ಸಾಂತನೇ ಅನಂತನೇ, ಏಕ ರೂಪನೇ ಬಹುರೂಪನೇ, ನಿರ್ಗುಣ ನಿರಾಕಾರನೇ, ಸಗುಣ ಸಾಕಾರನೇ, ಅಥವಾ ಶ್ರೀರಾಮಕೃಷ್ಣರು ಹೇಳುವಂತೆ ಇವೆಲ್ಲ ವನ್ನೂ ದಾಟಿದವನೆ? ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ನೇರವಾದ ಮಾತುಗಳಿಂದ ಇವೆಲ್ಲವಕ್ಕೂ ಉತ್ತರ ಸಿಗುತ್ತದೆ. ನಾಲ್ಕನೆಯ ಅಧ್ಯಾಯದಲ್ಲಿ ಆರರಿಂದ ಎಂಟನೆಯ ಶ್ಲೋಕಗಳವರೆಗೆ ತಾನು ಯಾರು? ಯಾವ ಉದ್ದೇಶಕ್ಕಾಗಿ ಭೂಲೋಕಕ್ಕೆ ಬಂದಿದ್ದೇನೆ ಎನ್ನುವುದನ್ನು ಸ್ಪಷ್ಟಪಡಿಸುತ್ತಾನೆ. ಅಲ್ಲಿ ಹೇಳುತ್ತಾನೆ :

''ನಾನು ಅಜನೂ ಅವ್ಯಯನೂ ಆಗಿದ್ದರೂ, ಪ್ರಾಣಿಗಳಿಗೆ ಒಡೆಯನಾಗಿದ್ದರೂ, ನನ್ನ ಪ್ರಕೃತಿಯನ್ನು ಹಿಡಿತದಲ್ಲಿ ಇಟ್ಟು ಕೊಂಡು ನನ್ನ ಮಾಯೆಯ ಮೂಲಕ ಮನುಷ್ಯನಾಗಿ ಅವ ತರಿಸುತ್ತೇನೆ. ಯಾವ್ಯಾವಾಗ ಧರ್ಮಕ್ಕೆ ಗ್ಲಾನಿಯಾಗುವುದೋ ಆವಾಗ ನಾನು ಅವತರಿಸುತ್ತೇನೆ. ಹಾಗೆ ಬಂದಾಗ ನನ್ನ ಕಾರ್ಯವೆಂದರೆ ದುಷ್ಟರನ್ನು ನಾಶಮಾಡಿ, ಶಿಷ್ಟರನ್ನು ಕಾಪಾಡು ವುದು ಹಾಗೂ ಧರ್ಮವನ್ನು ಸ್ಥಾಪಿಸುವುದು.'' ಹೀಗೆ ಹೇಳಿ ಸ್ಪಷ್ಟಪಡಿಸುತ್ತಾನೆ.

ಅರ್ಜುನನ ಮನಸ್ಸನ್ನು ಬದಲಾಯಿಸಲು ಈ ಮಾತುಗಳು ಸಾಕಾಗಲಿಲ್ಲ. ಆದುದರಿಂದ ಶ್ರೀಕೃಷ್ಣನು ಮುಂದೆ ಹನ್ನೊಂದ ನೆಯ ಅಧ್ಯಾಯದಲ್ಲಿ ಇನ್ನೂ ಸ್ಪಷ್ಟವಾಗಿ ತನ್ನ ಸ್ವರೂಪವನ್ನು ಪ್ರಕಟಿಸುತ್ತಾನೆ:

''ನಾನೇ ಸೂರ್ಯ, ಚಂದ್ರ, ನಕ್ಷತ್ರಗಳು ಹಾಗೂ ಗ್ರಹ ಗಳು, ಬೆಟ್ಟಗಳು, ಸಮುದ್ರಗಳು. ನಾನೇ ಒಳ್ಳೆಯವನು ಹಾಗೂ

ಕೆಟ್ಟವನು. ವೃಷ್ಣಿವಂಶದಲ್ಲಿ ಹುಟ್ಟಿದ ವಾಸುದೇವನೂ, ಪಾಂಡು ಪುತ್ರನಾದ ಅರ್ಜುನನೂ ನಾನೇ. ಈ ಪ್ರಪಂಚದಲ್ಲಿ ಏನೇನಿದೆಯೋ ಅವೆಲ್ಲಕ್ಕೂ ನಾನೇ ಬೀಜ ಸ್ವರೂಪ. ಈ ಪ್ರಪಂಚದಲ್ಲಿ ನಾನಲ್ಲದೆ ಯಾವುದೂ ಇಲ್ಲ. ಅರ್ಜುನ! ನನ್ನ ದಿವ್ಯ ವಿಭೂತಿಗಳಿಗೆ ಅಂತ್ಯವೇ ಇಲ್ಲ. ಈ ಅಂಶಗಳ ಬಗ್ಗೆ ಮಾತನಾಡುವುದರಿಂದ ಏನು ಪ್ರಯೋಜನ? ಇಡೀ ಪ್ರಪಂಚವನ್ನೇ ನಾನು ಆವರಿಸಿದ್ದೇನೆ.''

ಇದನ್ನು ಕೇಳಿ ಅರ್ಜುನನು ಆಶ್ಚರ್ಯಚಕಿತನಾಗಿಬಿಟ್ಟನು. ಅವನು ಶ್ರೀಕೃಷ್ಣನ ಮಾತನ್ನು ನಂಬದೆ ಇರದಾದನು. ಆದರೆ ಅದೇ ಸಮಯದಲ್ಲಿ ಪೂರ್ಣ ವಿಶ್ವಾಸವನ್ನು ಹೊಂದಲಿಲ್ಲ. ಆದುದರಿಂದ ಬಹಳ ನಮ್ರನಾಗಿ ತನ್ನ ಸಂದೇಹವನ್ನು ಮುಂದಿಟ್ಟ:

''ಹೇ ಕೃಷ್ಣ! ನಾನು ನಿನ್ನ ನಿಜಸ್ವರೂಪವನ್ನು ನೋಡಲು ಯೋಗ್ಯ ಎಂದು ಭಾವಿಸುವುದಾದರೆ, ದಯವಿಟ್ಟು ಅದನ್ನು ನನಗೆ ತೋರಿಸು.''

ಆಗ ಶ್ರೀಕೃಷ್ಣನು, ''ಅರ್ಜುನ ನೀನು ಇದನ್ನು ಸಾಧಾರಣ ಕಣ್ಣುಗಳಿಂದ ನೋಡಲಾರೆ, ಅದಕ್ಕಾಗಿ ನಿನಗೆ ದಿವ್ಯಚಕ್ಷುಸ್ಸನ್ನು ಕೊಡುತ್ತೇನೆ'' ಎಂದು ಹೇಳಿ ದಿವ್ಯಚಕ್ಷುಸ್ಸನ್ನು ದಯಪಾಲಿಸಿ ತನ್ನ ಈಶ್ವರೀ ರೂಪವನ್ನು ತೋರಿಸಿದನು. ಶ್ರೀಕೃಷ್ಣ ಯೋಗೇಶ್ವರ. ಯಾವ ರೂಪವನ್ನು ಬೇಕಾದರೂ ಧರಿಸಬಲ್ಲ. ಮತ್ತು ಅದನ್ನು ಬೇರೊಬ್ಬನು ಅನುಭವಿಸುವಂತೆಯೂ ಮಾಡಬಲ್ಲ. ಶ್ರೀಕೃಷ್ಣನಿಗೆ ಇತಿಮಿತಿಗಳಿಲ್ಲ. ತನ್ನ ವಿಶ್ವರೂಪವನ್ನು ಮಹಾಭಾರತದಲ್ಲಿ ಇನ್ನೂ ಕೆಲವರಿಗೆ ತೋರಿರುವುದನ್ನು ಕಾಣಬಹುದು. ಉದ್ಯೋಗ ಪರ್ವದಲ್ಲಿ ದುರ್ಯೋಧನನಿಗೆ ಸಂಧಿ ಮಾಡಿಕೊ ಎಂದು ಒಡಂಬಡಿಸಲು ಬಂದಾಗ, ಅವನು ಕೃಷ್ಣನನ್ನು ಹಿಡಿದು ಹಗ್ಗದಿಂದ ಕಟ್ಟುವಂತೆ ಆಳುಗಳಿಗೆ ಆಜ್ಞಾಪಿಸಿದನು. ಆಗ ಅಲ್ಲಿ ಸಭೆಯಲ್ಲಿರುವವರೆಲ್ಲ ಶ್ರೀಕೃಷ್ಣನಂತೆ ಕಾಣುತ್ತಾರೆ. ಯಾರನ್ನು ಕಟ್ಟುವುದು ಎಂದು ಕಕ್ಕಾಬಿಕ್ಕಿಯಾಗುತ್ತಾರೆ. ಆಗ ಶ್ರೀಕೃಷ್ಣ ದುರ್ಯೋಧನನಿಗೆ ತನ್ನ ವಿಶ್ವರೂಪವನ್ನು ತೋರಿಸಿದ. ಯುದ್ಧ ಮುಗಿದ ಮೇಲೆ ಶ್ರೀಕೃಷ್ಣ ದ್ವಾರಕೆಗೆ ಹಿಂದಿರುಗುತ್ತಿದ್ದಾಗ ಉದ್ದಾಲಕನೆಂಬ ಋಷಿ ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಂಡಾಗ ಅವನಿಗೆ ವಿಶ್ವರೂಪವನ್ನು ತೋರಿಸಿದನು. ಶಾಂತಿಪರ್ವದಲ್ಲಿ ನಾರಾಯಣನು ನಾರದರಿಗೆ ವಿಶ್ವರೂಪವನ್ನು ತೋರಿಸಿದ. ಅತಿ ಬಾಲ್ಯದಲ್ಲಿ ತನ್ನ ತಾಯಿಗೆ, ತನ್ನ ಬಾಯಿಯಲ್ಲಿ ಇಡೀ ಬ್ರಹ್ಮಾಂಡವನ್ನೇ ತೋರಿಸಿದನು. ಆದರೆ ಎಲ್ಲೂ ಅರ್ಜುನನಿಗೆ ತೋರಿಸಿದಷ್ಟು ವಿಸ್ತಾರವಾಗಿ ತೋರಿಸಿರಲಿಲ್ಲ. ಪ್ರಪಂಚದ ಮತ್ತಾವ ಸಾಹಿತ್ಯದಲ್ಲೂ ಇಂತಹ ಭಗವದ್ಭಾವನೆ ದೊರಕುವುದಿಲ್ಲ. ಇವನ್ನು ನೋಡಲು ಗುಂಡಿಗೆ ಬೇಕು. ಅಂತಹ ಧೈರ್ಯವನ್ನು ಶ್ರೀಕೃಷ್ಣನು ಅರ್ಜುನನಿಗೆ ತುಂಬಿದ, ಮತ್ತು ಹೇಳಿದ:

''ಅರ್ಜುನ, ನಾನಾ ವಿಧವಾದ ದಿವ್ಯವಾದ ಅನೇಕ ವರ್ಣ ಮತ್ತು ಆಕೃತಿಗಳುಳ್ಳ ನನ್ನ ಅಸಂಖ್ಯಾತ ರೂಪಗಳನ್ನು ನೋಡು.''

''ಆದಿತ್ಯರನ್ನು, ವಸುಗಳನ್ನು, ರುದ್ರನನ್ನು, ಅಶ್ವಿನೀದೇವತೆಗಳನ್ನು, ಮರುದ್ಗಣಗಳನ್ನು ಮತ್ತು ಹಿಂದೆ ಎಂದೂ ನೋಡದಿರುವ ಅನೇಕ ಆಶ್ಚರ್ಯಗಳನ್ನು ನೋಡು'' ಎಂದು ಹೇಳಿ ಅವನಿಗೆ ತನ್ನ ವಿಶ್ವರೂಪವನ್ನು ತೋರಿಸಿದನು. ಅರ್ಜುನನು ಅದೆಲ್ಲವನ್ನೂ ಕಂಡನು. ಮತ್ತು ತಾನು ಏನೇನನ್ನು ಶ್ರೀಕೃಷ್ಣನ ದೇಹದಲ್ಲಿ ನೋಡಿದನೋ ಅದೆಲ್ಲವನ್ನೂ ವಿವರಿಸಿದನು. ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯದಲ್ಲಿ ಅದೆಲ್ಲ ಅಡಕವಾಗಿದೆ. ಸ್ಥಳಾಭಾವದಿಂದ ಅದೆಲ್ಲವನ್ನೂ ಇಲ್ಲಿ ವಿವರಿಸುತ್ತಿಲ್ಲ. ಸಾರವಾಗಿ ಹೇಳುವುದಾದರೆ ವಿಶ್ವರೂಪದರ್ಶನವೆಂಬುದು ಒಂದು ಅಪೂರ್ವ ಅನುಭವ. ಅದನ್ನು ಭಗವಂತನ ಕೃಪೆಯಿಂದ ಮಾತ್ರ ತಡೆದುಕೊಳ್ಳಲು ಸಾಧ್ಯ. ಸತ್ಯವು ಸುಂದರವಾಗಿರುವಂತೆ ಕಠೋರವೂ ಆಗಿದೆ. ಶ್ರೀಕೃಷ್ಣನು ವನಮಾಲಿ ಮಾತ್ರವಲ್ಲ, ರುಂಡಮಾಲಿಯೂ ಆಗಿದ್ದಾನೆ. ವರ ಮತ್ತು ಅಭಯಗಳನ್ನು ಕೊಡುವ ಕೈಗಳು ಮಾತ್ರವಲ್ಲ ಅವನಿಗಿರುವುದು; ನಿರ್ಭಯವಾಗಿ, ನಿರ್ದಯವಾಗಿ ಅನವಶ್ಯವಾದುದನ್ನೆಲ್ಲಾ ಧ್ವಂಸ ಮಾಡುವ ಕೈಗಳೂ ಅವುಗಳಾಗಿವೆ. ಇವೆಲ್ಲವನ್ನೂ ನೋಡಿ ಅರ್ಜುನನು ಆಶ್ಚರ್ಯಚಕಿತನಾಗಿ, ಶ್ರೀಕೃಷ್ಣನ ಪೂರ್ಣ ವ್ಯಕ್ತಿತ್ವವನ್ನು ಅರ್ಥಮಾಡಿಕೊಂಡು, ಎರಡೂ ಕೈಗಳನ್ನೂ ಜೋಡಿಸಿ, ಶಿರಸಾ ನಮಸ್ಕರಿಸಿ, ''ಕೃಷ್ಣ! ದಯವಿಟ್ಟು ಈ ಉಗ್ರರೂಪದ ಹಿಂದಿರುವ ಸೌಮ್ಯರೂಪವನ್ನು ಹೊಂದಿ, ನಿನ್ನ ಹಳೆಯ ಕೃಷ್ಣರೂಪವನ್ನೇ ತೋರಿಸು'' ಎಂದು ಬೇಡಿಕೊಂಡನು.

ಇಲ್ಲಿ ಶ್ರೀಕೃಷ್ಣ ಅರ್ಜುನನಿಗಾಗಿ ತೋರಿದ ವಿಶ್ವರೂಪ ಅತಿ ವಿಶೇಷವಾದುದ್ದು. ಇದು ಪ್ರಪಂಚವನ್ನೇ ಸಂಹಾರ ಮಾಡುವಂತಹ ದೃಶ್ಯ. ಶ್ರೀಕೃಷ್ಣ ಇಲ್ಲಿ ಅರ್ಜುನನಿಗೆ ತಿಳಿಸುತ್ತಿದ್ದಾನೆ, ನೀನು ಯುದ್ಧದಲ್ಲಿ ನಿಮಿತ್ತ ಮಾತ್ರ. ಅವನು ಯುದ್ಧ ಮಾಡದೇ ಇದ್ದರೂ, ಕೌರವರೆಲ್ಲಾ ಸಾಯುವುದು ನಿಶ್ಚಯ. ತಾನು ಜನ್ಮವೆತ್ತಿರುವುದೇ ಅಧರ್ಮಿಗಳನ್ನೆಲ್ಲಾ ನಾಶಮಾಡುವುದಕ್ಕಾಗಿ. ಇಲ್ಲಿ ಶ್ರೀಕೃಷ್ಣನ ಅವತಾರ ವ್ಯಕ್ತಿತ್ವ ಪ್ರಕಟವಾಗುತ್ತದೆ. ಇದು ಆಧ್ಯಾತ್ಮಿಕ ಸಾಧಕರಿಗೆ ಶ್ರೀಕೃಷ್ಣನ ಒಂದು ದೊಡ್ಡ ಕೊಡುಗೆ. ತನ್ನ ಬಾಯಿಯಿಂದಲೇ ಅರ್ಜುನನ ಮೂಲಕ ಜಗತ್ತಿಗೆ ಪ್ರಕಟಿಸುತ್ತಾನೆ. ತಾನು ಸಾಧಾರಣ ಪುರುಷನಲ್ಲ, ಯಾರ ದರ್ಶನಕ್ಕಾಗಿ ಯೋಗಿಗಳು, ಋಷಿಗಳು, ಆಧ್ಯಾತ್ಮಿಕ ಸಾಧಕರು ಏಕಚಿತ್ತರಾಗಿ ಹಲವಾರು ವರ್ಷಗಳ ಕಾಲ ತಪಸ್ಸು ಮಾಡುತ್ತಾರೋ, ಆ ಭಗವಂತನೇ ನಾನು. ಈಗ ಭೂಲೋಕದಲ್ಲಿ ಕೃಷ್ಣನಾಗಿ ಜನ್ಮವೆತ್ತಿದ್ದೇನೆ. ಈ ಬಾರಿ ಜನ್ಮವೆತ್ತಿರುವ ಕಾರಣವನ್ನೂ ಅವನೇ ಹೇಳುತ್ತಾನೆ: ''ಅರ್ಜುನ, ಯಾವ್ಯಾವಾಗ ಧರ್ಮದ ಅವನತಿಯಾಗುತ್ತದೆಯೋ, ಅಧರ್ಮವು ತಲೆ ಎತ್ತಿ ನಿಲ್ಲುವುದೋ, ಆಗ ನಾನು ಸಾಧುಗಳ ರಕ್ಷಣೆಗಾಗಿ ಮತ್ತು ದುಷ್ಟರ ನಾಶಕ್ಕೆ ಹಾಗೂ ಧರ್ಮಸಂಸ್ಥಾಪನೆಗಾಗಿ ಯುಗ ಯುಗದಲ್ಲೂ ಅವತರಿಸುತ್ತೇನೆ.''

ಅವತಾರ ತತ್ವವನ್ನು ಇಷ್ಟು ನಿಖರವಾಗಿ, ಧೈರ್ಯವಾಗಿ ಹಿಂದೆ ಯಾವ ಅವತಾರ ಪುರುಷರೂ ಹೀಗೆ ಸ್ಪಷ್ಟಪಡಿಸಿರಲಿಲ್ಲ. ಇದು ಗೀತೆಯ ಶ್ರೀಕೃಷ್ಣನ ವ್ಯಕ್ತಿತ್ವವನ್ನು ತೋರಿಸುತ್ತದೆ.

ಇಲ್ಲಿಯ ಇನ್ನೊಂದು ವಿಶೇಷವೆಂದರೆ ಅರ್ಜುನನ್ನು ಪ್ರತಿನಿಧಿಯಾಗಿಟ್ಟುಕೊಂಡು ಇಡಿಯ ಮಾನವ ಕುಲಕ್ಕೇ ತನ್ನ ಉಪದೇಶವನ್ನು ನೀಡಿದನು. ಇದು ಶ್ರೀಕೃಷ್ಣನ ಅಗಾಧ ವ್ಯಕ್ತಿತ್ವ. ಅರ್ಜುನನ ಮನೋರೋಗಕ್ಕೆ ಶ್ರೀಕೃಷ್ಣನಿತ್ತ ಪರಿಹಾರವೇನು? ಮೊದಲು ಎರಡು ಶ್ಲೋಕಗಳಲ್ಲಿ ಧೈರ್ಯ ತುಂಬಿದ. ಸ್ವಲ್ಪ ಕಠಿಣವಾದ ಶಬ್ದಗಳನ್ನೇ ಉಪಯೋಗಿಸಿದ. ಶ್ರೀಕೃಷ್ಣ ಅರ್ಜುನನಿಗೆ ಹೇಳಿದ: ''ಅರ್ಜುನ! ಇಂತಹ ವಿಷಮ ಸಮಯದಲ್ಲಿ ನಿನಗೆ ಈ ಬುದ್ಧಿಮಾಲಿನ್ಯ ಹೇಗೆ ಬಂದಿತು? ಇದು ಅನಾರ್ಯರಿಗೆ ತಕ್ಕುದಾದದ್ದು. ನರಕಕ್ಕೆ ಒಯ್ಯುವಂಥದ್ದು. ಅಪಕೀರ್ತಿಯನ್ನು ತರುತ್ತದೆ. ಅರ್ಜುನ! ಹೇಡಿಯಾಗಬೇಡ. ಇದು ನಿನಗೆ ಯೋಗ್ಯವಲ್ಲ. ಅತಿ ಹೇಯವಾದ ಹೃದಯದೌರ್ಬಲ್ಯದಿಂದ ಪಾರಾಗಿ ಎದ್ದು ನಿಲ್ಲು.''

ಈ ಎರಡು ಶ್ಲೋಕಗಳು ಟಾನಿಕ್‌ನಂತೆ ಅರ್ಜುನನ ಮೇಲೆ ಪರಿಣಾಮ ಬೀರಿತು. ಆದರೆ ಅದು ಬಹಳ ತಾತ್ಕಾಲಿಕ ಎನಿಸಿತು ಶ್ರೀಕೃಷ್ಣನಿಗೆ. ಇದು ಅರ್ಜುನನನಿಗೆ ಮಾತ್ರವಲ್ಲ. ಜೀವನದಲ್ಲಿ ಅತ್ಯಂತ ದುಃಖ ಮತ್ತು ಮನಃ ಕಷ್ಟದಲ್ಲಿರುವವರಿಗೆಲ್ಲಾ ತಾತ್ಕಾಲಿಕ ಧೈರ್ಯ ನೀಡುತ್ತದೆ. ಶ್ರೀಕೃಷ್ಣನು ಶಾಶ್ವತ ಪರಿಹಾರ ನೀಡಬೇಕೆಂದು ಬಯಸಿದ್ದನು.

ಅಂತಹ ಶಾಶ್ವತ ಆತ್ಮವಿಶ್ವಾಸವನ್ನು ಆತ್ಮಜ್ಞಾನದ ಮೂಲಕ ಮಾತ್ರ ಹೊಂದಲು ಸಾಧ್ಯವಾಗುತ್ತದೆಂದು ಅರ್ಜುನನಿಗೆ ಜ್ಞಾನಮಾರ್ಗವನ್ನು ಬೋಧಿಸಿದನು. ಅವನು ಅರ್ಜುನನಿಗೆ ಹೇಳಿದ, ''ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ.'' ಅಂದರೆ ಜೀವನದ ಎಲ್ಲಾ ಕಾಯಿಲೆಗಳಿಗೆ ಆತ್ಮಜ್ಞಾನವು ಮಾತ್ರ ಶಾಶ್ವತ ಪರಿಹಾರ. ಅದನ್ನು ನಾವು ಯಾವಾಗ ಬಯಸುತ್ತೇವೆ? ಜೀವನದಲ್ಲಿ ಬಗೆಹರಿಸಲಾಗದ ಕಷ್ಟಗಳಿಂದ ತುಂಬಿದಾಗ, ಸಂಘರ್ಷಗಳಿಂದ ಜೀವನ ಹರಿದು ಹೋದಾಗ. ಆಗ ನಾವು ಸತ್ಯ ಮತ್ತು ಭಗವಂತನೆಡೆಗೆ ಮನಸ್ಸನ್ನು ತಿರುಗಿಸುತ್ತೇವೆ.

ಅರ್ಜುನನಿಗೆ ಈಗ ಅಂತಹ ಪರಿಸ್ಥಿತಿ ಬಂದೊದಗಿತ್ತು. ಅರ್ಜುನನು ಶ್ರೀಕೃಷ್ಣನಲ್ಲಿ ಸಂಪೂರ್ಣ ಶರಣಾಗತನಾಗಿ, ''ಮಾರ್ಗ ತೋರು'' ಎಂದು ಬೇಡಿದಾಗ ಶ್ರೀಕೃಷ್ಣನು ಅರ್ಜುನನಿಗೆ ಜೀವನದ ತತ್ತ್ವವನ್ನು ತಿಳಿಸುವ ಜ್ಞಾನಯೋಗವನ್ನು ಬೋಧಿಸಿದನು. ಅದು ಅವನ ಮನಸ್ಸನ್ನು ಸ್ಥಿರಗೊಳಿಸಿತು. ಇದನ್ನೇ ಶ್ರೀರಾಮಕೃಷ್ಣರು ''ಬಟ್ಟೆಯ ತುದಿಯಲ್ಲಿ ಜ್ಞಾನವನ್ನು ಗಂಟು ಹಾಕಿಕೊಂಡು ನಿಮಗೆ ಇಷ್ಟವಾದ ಕೆಲಸದಲ್ಲಿ ತೊಡಗಿ'' ಎನ್ನುತ್ತಿದ್ದರು.

ಶ್ರೀಕೃಷ್ಣನು ಅರ್ಜುನನಿಗೆ ಹಂತಹಂತವಾಗಿ ಹದಿನೆಂಟು ಅಧ್ಯಾಯಗಳಲ್ಲಿ ಬೋಧಿಸಿದನು. ಈ ಎಲ್ಲ ಬೋಧನೆಗಳ ಒಟ್ಟು ಮೊತ್ತವನ್ನು ನೋಡಿದರೆ ಗೀತೆಯ ಶ್ರೀಕೃಷ್ಣನ ವ್ಯಕ್ತಿತ್ವ ಎಷ್ಟು ಅಗಾಧವಾದುದ್ದು ಎಂದು ಅರ್ಥವಾಗುತ್ತದೆ. ಈ ಉಪದೇಶಗಳು ಇಡಿಯ ಜಗತ್ತಿಗೇ ಅನ್ವಯಿಸುವಂಥದ್ದು. ಅರ್ಜುನನು ನಿಮಿತ್ತ ಮಾತ್ರ. ಇದು ಅರ್ಜುನನ ಮೇಲೆ ಎಂತಹ ಪರಿಣಾಮ ಬೀರಿತೆಂದರೆ ಕೊನೆಯಲ್ಲಿ ಶರಣಾಗಿ ಹೇಳುತ್ತಾನೆ: ''ನನ್ನ ಭ್ರಮೆ ನಾಶವಾಗಿದೆ. ನಿನ್ನ ಅನುಗ್ರಹದಿಂದ ನಾನು ನನ್ನ (ನೈಜಸ್ಥಿತಿಯ) ಸ್ಮರಣೆಯನ್ನು ಪಡೆದುಕೊಂಡಿದ್ದೇನೆ.''

## ಜನಜೀವನದಲ್ಲಿ ಗೀತೆಯ ಸ್ಥಾನ

''ಗೀತೆ ಕಾಲಾನಂತರ ವ್ಯಕ್ತಿಗೆ ಮುಕ್ತಿಯನ್ನು ಕೊಡುವ ಗ್ರಂಥ ಮಾತ್ರವಲ್ಲ; ಇಹದಲ್ಲಿ ಜೀವರಿಗೆ ಸುಖವನ್ನೂ, ಇಡೀ ದೇಶದಲ್ಲಿ ಸಮಾಜಕ್ಕೆ ಸಕಲ ಕಾರ್ಯರಂಗದಲ್ಲಿಯೂ ಒಂದು ಹೊಸ ಹುರುಪನ್ನೂ ಕೊಡಬಲ್ಲುದು. ಇದು ಪಾರಾಯಣಗ್ರಂಥವಾಗಿ ನಾಲಿಗೆಯ ಮೇಲೆ ನಲಿದಾಡಿದರೆ ಸಾಲದು. ಇದು ಮುಖ್ಯವಾಗಿ ಅನುಷ್ಠೇಯ ಗ್ರಂಥ. ಇದರ ಭಾವ ನಮ್ಮ ಹೃದಯದ ಆಳಕ್ಕೆ ಹೋಗಬೇಕು. ಗೀತಾಮೃತ ನಮ್ಮ ಜೀವನದ ತಾಯಿಬೇರಿಗೆ ತಾಗಬೇಕು..

''ನಮ್ಮ ಜೀವನವೇ ಒಂದು ಕುರುಕ್ಷೇತ್ರ. ಎಲ್ಲಾ ಮಾನವರೂ ಅರ್ಜುನನಂತೆ ಬಾಹ್ಯ ಶತ್ರುವಿನೊಂದಿಗೆ ಯದ್ಧ ಮಾಡದೇ ಇದ್ದರೂ, ಬೇರೆ ಬೇರೆ ಕಾರ್ಯಕ್ಷೇತ್ರಗಳಲ್ಲಿ ನಿರತರಾಗಿರುವಾಗ ಅರ್ಜುನನ ಮನಸ್ಸಿನಲ್ಲಿ ಯಾವ ಯಾವ ಪ್ರಶ್ನೆಗಳೆದ್ದವೋ, ಅವನು ಯಾವ ದುಃಖಕ್ಕೆ ಈಡಾದನೋ, ಅವನು ಯಾವ ಧರ್ಮಸಂಕಟಕ್ಕೆ ಒಳಗಾದನೋ ಅದರಂತೆ ನಾವೆಲ್ಲರೂ ಒಂದಲ್ಲ ಒಂದು ದಿನ ಅನುಭವಿಸುವೆವು. ಶ್ರೀಕೃಷ್ಣ ಅರ್ಜುನನಿಗೆ ಮಾತ್ರ ಸಾರಥಿಯಲ್ಲ, ಎಲ್ಲಾ ಜೀವರ ರಥಕ್ಕೆ ಸಾರಥಿ ಅವನು. ಅವನನ್ನು ನಂಬಿ ನಮ್ಮ ಜೀವನರಥವನ್ನು ಮುಂದುವರಿಸಿದರೆ, ನಮ್ಮ ಸಂಶಯಗಳನ್ನು ಪರಿಹರಿಸಿ ಕಷ್ಟ ನಷ್ಟಗಳ ಕೋಟಲೆಯಿಂದ ಮೇಲೆತ್ತಿ, ಶಾಶ್ವತ ಸಚ್ಚಿದಾನಂದವನ್ನು ನೀಡುವನೆಂದು ಭರವಸೆ ಕೊಟ್ಟಿರುವನು. ಶ್ರೀಕೃಷ್ಣ ಇಡೀ ಮಾನವ ಕೋಟಿಗೆ ಎಲ್ಲಾ ಕಾಲಕ್ಕೂ ಎಲ್ಲಾ ದೇಶಕ್ಕೂ ಕೊಟ್ಟ ಭರವಸೆಯನ್ನೊಳಗೊಂಡಿದೆ ಶ್ರೀಮದ್ಭಗವದ್ಗೀತೆ.''

— ಸ್ವಾಮಿ ಸೋಮನಾಥಾನಂದ

*(ಸ್ವಾಮಿ ಆದಿದೇವಾನಂದರ 'ಶ್ರೀಮದ್ಭಗವದ್ಗೀತೆ (ಸಟೀಕಾ)' ಗ್ರಂಥದ ಮುನ್ನುಡಿಯಿಂದ)*